# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 3338/2022

**ಸಾಕ್ಷಿಯನ್ನು ದಿಃ 04.07.2023 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ರಾಜೇಗೌಡ | ಸಿ.ಡಬ್ಲ್ಯೂ: 3 | ಪಿ.ಡಬ್ಲ್ಯೂ: 3 |
| ತಂದೆಯ ಹೆಸರು | ಹೆಚ್.ಪಿ.ಚಲುವೇಗೌಡ | | |
| ವಯಸ್ಸು | 52 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಪರಿಚಯ ಇದೆ. ಅವರು ನನ್ನ ಮನೆಯ ಪಕ್ಕದವರು. ಚಾಸಾ–1,2 ರವರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇಲ್ಲ. ನಾನು ಪ್ರತ್ಯಕ್ಷ ಯಾವುದೇ ಗಲಾಟೆ ನೋಡಿಲ್ಲ. ಆರೋಪಿ ನನ್ನ ಸಮಕ್ಷಮ ಚಾಸಾ–1 ರವರಿಗೆ ಯಾವುದೇ ರೀತಿ ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

2. ದಿಃ 24.01.2017 ರಂದು ರಾತ್ರಿ 10.30 ರ ಸಮಯ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ವಾಕಿಂಗ್ ಮಾಡುವಾಗ ಚಾಸಾ–1 ರವರು ನೀರು ಹಿಡಿಯುತ್ತಿದ್ದು, ಆ ಸಮಯ 1 ನೇ ಆರೋಪಿಯು ಜಗಳ ಮಾಡಿ, ಚಾಸಾ–1 ರವರನ್ನು ಕತ್ತರಿಸಿ ಹಾಕುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ–1,2 ರವರು 1 ನೇ ಆರೋಪಿಗೆ ಏಕೆ ಬೈಯುತ್ತಿದ್ದೀರಾ ಎಂದು ಕೇಳಿದಾಗ 1 ನೇ ಆರೋಪಿ ಚಾಸಾ–1 ರವರನ್ನು ಅಡ್ಡಗಟ್ಟಿ, ನಾನು ಈಗಾಗಲೇ ಕೊಲೆ ಕೇಸಿನಲ್ಲಿ ಜೈಲಿಗೆ ಹೋಗಿದ್ದೇನೆ, ನಿಮ್ಮನ್ನು ಕೂಡ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ತನ್ನ ಹೆಂಡತಿಗೆ ಮನೆಯಿಂದ ವಚ್ಚನ್ನು ತೆಗೆದುಕೊಂಡು ಬಾ ಇವರನ್ನು ಕೊಲೆ

ಮಾಡುತ್ತೇನೆ ಎಂದು ಹೇಳಿದರು ಎಂದರೆ ಸರಿಯಲ್ಲ. ಈ ಬಗ್ಗೆ 2,3 ನೇ ಆರೋಪಿತರು 1 ನೇ ಆರೋಪಿಗೆ ಕುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿಯಲ್ಲ. ಈ ರೀತಿ ನಾನು ಹೇಳಿಕೆ ಕೊಟ್ಟಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.2 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.